ಮೊದಲ ಬಾರಿಗೆ ಕಂಡ ಮಂಗನ ಕಾಯಿಲೆ ಕೆಲವು ವರ್ಷಗಳಲ್ಲಿಯೇ ರಾಜ್ಯದ ಇತರೆ ಮಲೆನಾಡು ಭಾಗಗಳಿಗೆ ಹಬ್ಬಿತು. ರೋಗಗ್ರಸ್ಥ ಮಂಗಗಳನ್ನು ಕಚ್ಚಿದ ಉಣ್ಣೆಯ ಮುಖಾಂತರ ಹಬ್ಬುವ ಈ ಕಾಯಿಲೆ ಕ್ರಮೇಣ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿ ಪಕ್ಕದ ತಮಿಳುನಾಡು, ಗೋವಾ, ಕೇರಳ, ಆಂಧ್ರಪ್ರದೇಶ, ದೂರದ ಗುಜರಾತ್, ಮತ್ತಿತರ ರಾಜ್ಯಗಳನ್ನು ಆಕ್ರಮಿಸಿತಲ್ಲದೆ ಪಟ್ಟಣ ಪ್ರದೇಶಗಳಲ್ಲೂ ಸೋಂಕು ತಗಲಿರುವುದು ಧೃಡಪಟ್ಟಿತು.

ಹಾಗಾದರೆ 1957ಕ್ಕೂ ಮೊದಲು ಮಂಗನ ಕಾಯಿಲೆಗೆ ಕಾರಣವಾಗುವ ವೈರಾಣುಗಳು ಅಸ್ತಿತ್ವದಲ್ಲಿ ಇರಲೇ ಇಲ್ಲವೇ? ಇಲ್ಲವೆಂದು ಹೇಳಲಾಗದು. ಜನಸಂಖ್ಯೆ ಹೆಚ್ಚಿದಂತೆ ಹಾಗೂ ಅರಣ್ಯ ಪ್ರದೇಶ ಒತ್ತುವರಿಯಾದ ಕಾರಣ ಮಂಗಗಳಲ್ಲಿ ಮಾತ್ರ ಸೀಮಿತವಾಗಿರಬಹುದಾದ ಈ ವೈರಸ್ ಕಾಡಿಗೆ ಲಗ್ಗೆ ಇಟ್ಟ ಮಾನವರ ನಿರಂತರ ಸಂಪರ್ಕ ಪಡೆಯುವಂತಾಯಿತು. ಮಂಗಗಳಿಂದಲೇ ವಿಕಾಸಗೊಂಡಿರುವ ಮನುಷ್ಯನ ದೇಹದಲ್ಲಿ ಬದುಕುಳಿಯುವ ಹಾಗೂ ಸೋಂಕನ್ನು ಉಂಟು ಮಾಡಲು ಶಕ್ಯವಿರುವ ಕಾರಣ ಮನುಷ್ಯರಲ್ಲಿಯೂ ಮಂಗನ ಕಾಯಿಲೆ ಹಬ್ಬಿಸುವಲ್ಲಿ ಯಶಸ್ವಿಯಾಯಿತು.

ಸಂಶೋಧನೆಗಳ ಪ್ರಕಾರ ಈ ವೈರಸ್, ಮಂಗಗಳಲ್ಲಷ್ಟೇ ಅಲ್ಲ ಕಾಡಿನಲ್ಲಿ ವಾಸಿಸುವ ಇಲಿ, ಕೆಲ ಸರೀಸೃಪಗಳು, ಅಳಿಲು, ಬರ್ಕ ಮುಂತಾದ ಪ್ರಾಣಿಗಳು ಸಂಗ್ರಾಹಕ ಜೀವಿಗಳಾಗಿದೆ. ವಲಸೆ ಹಕ್ಕಿಗಳ ಮುಖಾಂತರ ವೈರಸ್‌ಗಳನ್ನು ಒಳಗೊಂಡ ಉಣ್ಣೆಗಳು ಅನ್ಯದೇಶಗಳಿಗೆ ಹೋಗಿ ನೆಲೆಯೂರಲು ಹೆಚ್ಚು ಸಮಯ ತಗಲುವುದಿಲ್ಲ. ಇದರಿಂದ ಇನ್ನು ಕೆಲವೇ ವರ್ಷಗಳಲ್ಲಿ ಮಂಗನ ಕಾಯಿಲೆ ಜಾಗತಿಕ ಸೋಂಕಾಗಿ ಪರಿಣಮಿಸಿ ತಲ್ಲಣಗೊಳಿಸಿದರೆ ಯಾವ ಆಶ್ಚರ್ಯವೂ ಇಲ್ಲ.

## ಪ್ರಾಣಿ ಮೃತದೇಹದ ಅಪಾಯ

ರೋಗಪೀಡಿತ ಜಾನುವಾರುಗಳು ಸತ್ತಾಗ ಅವುಗಳನ್ನು ಆಳವಾದ ಗುಂಡಿ ತೋಡಿ ಹೂಳುವುದು ಸರಿಯಾದ ಕ್ರಮ. ಆದರೆ ಬಹುತೇಕರು ಸತ್ತ ಜಾನುವಾರುಗಳನ್ನು ಬಯಲಿನಲ್ಲಿ ಅಥವಾ ಕಾಡಿನಲ್ಲಿ ಎಸೆದು ಬರುತ್ತಾರೆ. ಇದರಿಂದ ಮೃತದೇಹದಲ್ಲಿನ ರೋಗಾಣುಗಳು ಸುತ್ತಲಿನ ಪರಿಸರ ಸೇರಿ ಇತರೆ ಪ್ರಾಣಿಗಳಿಗೆ, ಮಾನವರಿಗೂ ಕೂಡ ಸೋಂಕು ತರುವ ಸಾಧ್ಯತೆ ಹೆಚ್ಚು. ಈ ರೀತಿ ಹಬ್ಬುವ ಸೋಂಕುಗಳಲ್ಲಿ ಮಾರಕ 'ಆಂಥ್ರಾಕ್ಸ್' ಪ್ರಮುಖವಾದುದು. ಆಂಥ್ರಾಕ್ಸ್ ಒಂದು ಬ್ಯಾಕ್ಟೀರಿಯಾದಿಂದ ಬರುವ ಕಾಯಿಲೆಯಾಗಿದ್ದು ಮನುಷ್ಯನಿಂದ ಹಿಡಿದು ಎಲ್ಲಾ ಬಿಸಿರಕ್ತ ಪ್ರಾಣಿಗಳನ್ನೂ ಬಾಧಿಸುತ್ತದೆ.

ಭಾರತ ಸೇರಿದಂತೆ ಜಗತ್ತಿನ ಹಲವಾರು ದೇಶಗಳಲ್ಲಿ ಆಂಥ್ರಾಕ್ಸ್ (ನೆರಡಿ ರೋಗ) ಜೀವಂತವಾಗಿದೆ. ಈ ರೋಗವನ್ನು ಉಂಟು ಮಾಡುವ ಬ್ಯಾಕ್ಟೀರಿಯಾಗೆ ಒಂದು ವಿಶಿಷ್ಟವಾದ ಗುಣವಿದೆ. ಅದು ತನ್ನ ಸುತ್ತಲೂ ಕೋಶವೊಂದನ್ನು (ರಕ್ಷಾಕವಚ) ರಚಿಸಿಕೊಂಡು ಮಣ್ಣಿನಲ್ಲಿ ನೂರಾರು ವರ್ಷಗಳವರೆಗೆ ಬದುಕಬಲ್ಲದು. ಅದರ ಸುತ್ತಲಿನ ರಕ್ಷಾಕವಚವು ಆ ಬ್ಯಾಕ್ಟೀರಿಯಾವನ್ನು ಹೊರಜಗತ್ತಿನ ಎಂತಹ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಜೀವಂತವಾಗಿಡುತ್ತದೆ. ಹೀಗೆ ಮಣ್ಣಿನಲ್ಲಿ ಹಲವಾರು ವರ್ಷ ಬದುಕುಳಿದ ಅದು ತನಗೆ ಅನುಕೂಲ ಪರಿಸ್ಥಿತಿ ನಿರ್ಮಾಣಗೊಂಡಾಗ ತನ್ನ ಸಂಪರ್ಕಕ್ಕೆ ಸಿಗುವ ಬಿಸಿರಕ್ತ ಪ್ರಾಣಿಗಳನ್ನು (ಹೆಚ್ಚಾಗಿ ಕಲುಷಿತ ಆಹಾರ, ನೀರಿನ ಮುಖಾಂತರ) ಬಾಧಿಸುತ್ತದೆ.

ಹಳ್ಳಿಗಳಿಂದ ಹಿಡಿದು ರಾಜಧಾನಿಯವರೆಗೆ ಇರುವ ಯಾವುದೇ ಊರುಗಳಲ್ಲಿ ನೋಡಿದರೂ ಕಾಣಸಿಗುವ ಬೀದಿನಾಯಿಗಳು, ಬೀಡಾಡಿ ದನಗಳು, ಬೀದಿ ಬಸವ ಮಾರಿಗೆ ಬಿಟ್ಟ ಕೋಣಗಳು ಯಾವುದೇ ಮುಂಜಾಗ್ರತಾ ಲಸಿಕೆ, ಜಂತುನಾಶಕ ಇಲ್ಲದೆ ಕಂಡ ಕಂಡಲ್ಲಿ ಓಡಾಡಿ ಅದೆಷ್ಟೋ ರೋಗಾಣುಗಳನ್ನು ಹೊತ್ತು ತಿರುಗುತ್ತಿರುತ್ತಾ ಸಾಕು ಪ್ರಾಣಿಗಳ ಹಾಗೂ ಮನುಷ್ಯರ ನಿರಂತರ ಸಂಪರ್ಕಕ್ಕೆ ಬರುತ್ತವೆ. ಅದರಲ್ಲೂ ಮುಖ್ಯವಾಗಿ ನಾಯಿಗಳಲ್ಲಿ ಕಂಡುಬರುವ ಕೆಲವು ಲಾಡಿ ಹುಳುಗಳು (ಉದಾ: **hydated disease**) ಮನುಷ್ಯನಿಗೆ ಮತ್ತು ಇತರೆ ಜಾನುವಾರುಗಳಿಗೆ ಮಾರಕವಾಗಬಲ್ಲದು.

ಬೀಡಾಡಿ ಜಾನುವಾರುಗಳು ಕಾಲು ಬಾಯಿ ಜ್ವರದಂತಹ ರೋಗಾಣುಗಳನ್ನು ಹೊತ್ತು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಸಾಗಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಇದರಿಂದ ಆ ಪ್ರದೇಶದ ಸುತ್ತಮುತ್ತಲಿನ ಎಲ್ಲಾ ಜಾನುವಾರುಗಳಲ್ಲಿ ಅಪಾಯಕಾರಿಯಾಗಿ ಪರಿಣಮಿಸುತ್ತದೆ.

ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಭಾರತದಲ್ಲಿ ಪ್ರತಿವರ್ಷ ರೇಬಿಸ್‌ನಿಂದ 20000 ಕ್ಕೂ ಹೆಚ್ಚು ಜನ ಮರಣ ಹೊಂದುತ್ತಾರೆ. 2030ರ ವೇಳೆಗೆ ಭಾರತ ರೇಬಿಸ್‌ನಿಂದ ಮುಕ್ತವಾಗಲು ಶ್ರಮಿಸುತ್ತಿದೆ. ಆದರೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಬೀದಿ ನಾಯಿಗಳ ಸಂತತಿ ಇರುವ ದೇಶದಲ್ಲಿ ರೇಬಿಸ್‌ನಿಂದ ಮುಕ್ತ ಹೊಂದಲು ಸಾಧ್ಯವೆ? ಬೀದಿ ನಾಯಿಗಳಲ್ಲಿ ರೇಬಿಸ್ ಲಸಿಕೆಯನ್ನು ಬೆಂಗಳೂರಿನಂತಹ ಕೆಲವು ಮಹಾನಗರ ಪಾಲಿಕೆಗಳಲ್ಲಿ ಹಾಕಲಾಗುತ್ತಿದೆ. ಆದರೂ ಎಲ್ಲೆಡೆ ಆ ವ್ಯವಸ್ಥೆ ಜಾರಿಯಲ್ಲಿರುವುದಿಲ್ಲ. ಅವು ನಿರಂತರವಾಗಿ ಮನುಷ್ಯರು, ಸಾಕು ಪ್ರಾಣಿಗಳ, ಅರಣ್ಯದಲ್ಲಿರುವ ನರಿ, ತೋಳಗಳ ಸಂಪರ್ಕಕ್ಕೆ ಬಂದು ರೇಬಿಸ್ ಉಲ್ಬಣವಾಗಲು ಕಾರಣವಾಗಿರುತ್ತವೆ.

ನಮ್ಮಲ್ಲಿರುವ ಪ್ರಾಣಿದಯಾ ಸಂಘಗಳು ಬೀದಿ ನಾಯಿಗಳ ಹತೋಟಿಗೆ ಸಂತಾನಹರಣ ಶಸ್ತ್ರ ಚಿಕಿತ್ಸೆ, ಸೂಕ್ತ ಲಸಿಕಾ ಕಾರ್ಯಕ್ರಮಗಳ ಮುಖಾಂತರ ಅವುಗಳಿಂದ ಹಬ್ಬಬಹುದಾದ ರೇಬಿಸ್‌ನಂತಹ ಪ್ರಾಣಿಜನ್ಯ ರೋಗಗಳಿಗೆ ಕಡಿವಾಣ ಹಾಕಲು ಸರಕಾರದೊಂದಿಗೆ ಕೈ ಜೋಡಿಸಿ ಸಹಕರಿಸಬೇಕು. ಸಾರ್ವಜನಿಕರು ಅವುಗಳನ್ನು ಪೋಷಿಸಿ ಸಾಂಕ್ರಾಮಿಕ ರೋಗಗಳ ಆಗರವಾಗಲು ಅವಕಾಶ ನೀಡಬಾರದು.







ಲೇಖಕರು ತೀರ್ಥಹಳ್ಳಿಯಲ್ಲಿ ಪಶುವೈದ್ಯರು.
**ಸಂಪರ್ಕ: 9449585021**